**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 27.03.2026**

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಜಿ ಬಿ ಎಸ್ ವಕೀಲರಿಂದಃ**

1. ನಾನು 2011 ನೇ ಇಸವಿಯಿಂದ ಪತ್ರ ಬರಹಗಾರನಾಗಿ ಕರ್ತವ್ಯ ಮಾಡುತ್ತಿದ್ದೇನೆ. ವಾದಿ ನಿಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿ ನಮ್ಮ ಊರಿನ ಪಕ್ಕದ ಗ್ರಾಮದವರು ಆದ್ದರಿಂದ ಪರಿಚಯ ಎಂದು ಹೇಳುತ್ತಾರೆ. ದಾವೆ ಸಲ್ಲಿಸಿದ ಎರಡು ತಿಂಗಳ ನಂತರ ಉಗ್ರೇಗೌಡರ ಹೆಂಡತಿ ಲೀಲಾವತಿ ತೀರಿಹೋದರು ಎಂದು ವಾದಿ ನನಗೆ ತಿಳಿಸಿದರು. ದಾವೆ ಸಲ್ಲಿಸಿದ ನಂತರ ಉಗ್ರೇಗೌಡರು ಎಷ್ಟು ದಿನದ ನಂತರ ತೀರಿಹೋದರು ಎಂದು ಸಾಕ್ಷಿ ಗೊರತ್ತಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಸ್ವತಃ ತೀರಿಹೋದರು ಎಂದು ತಿಳಿಸಿದರು ಎಂದು ಹೇಳುತ್ತಾರೆ.

2. ದಿಃ 06.11.2020 ರಂದು ಎಷ್ಟು ಗಂಟೆಗೆ ಪತ್ರ ತಯಾರಿಸಲು ಬಂದಿದ್ದರು ಎಂದರೆ ಸಾಕ್ಷಿ ದಿಃ 05.11.2020 ರಂದು ಪತ್ರ ತಯಾರಿಸಿದ್ದರು. ದಿಃ 06.11.2020 ರಂದು ಬೆಳಿಗ್ಗೆ 11.30 ಗಂಟೆಗ ಪತ್ರ ನೋಂದಣಿ ಮಾಡಿಸಿದೆ ಎಂದು ಹೇಳುತ್ತಾರೆ. ದಿಃ 05.11.2020 ರಂದು ವಾದಿ, ಉಗ್ರೇಗೌಡ, ಲೀಲಾವತಮ್ಮ, ಇಬ್ಬರು ಸಾಕ್ಷೀದಾರರು ನನ್ನ ಕಚೇರಿಗೆ ಬಂದಿದ್ದರು. ಈ ಮೇಲಿನ ಎಲ್ಲರು ನನಗೆ ಕರಾರುಪತ್ರದ ಒಕ್ಕಣೆಗಳನ್ನು ಮಾಡಲು ಮಾಹಿತಿ ಕೊಟ್ಟರು. ನನ್ನ ಸಮಕ್ಷಮ ಪಕ್ಷಗಾರರ ನಡುವೆ ಈ ಹಿಂದೆ ಆಗಿದ್ದ

ಮಾತುಕತೆಯ ಬಗ್ಗೆ ಚರ್ಚೆಯಾಗಿಲ್ಲ. ರೂ.5 ಲಕ್ಷ ಹಣವನ್ನು ನೊಂದಣಿ ಸಮಯದ ಪೂರ್ವದಲ್ಲಿ ಉಪನೋಂದಣಾಧಿಕಾರಿ ಕಚೇರಿಯಲ್ಲಿ ವಾದಿ ಉಗ್ರೇಗೌಡರಿಗೆ ಸಾಕ್ಷಿಗಳ ಸಮಕ್ಷಮ ಕೊಟ್ಟರು. ನೀವು ಕರಾರುಪತ್ರದ ಕರಡನ್ನು ತಯಾರಿಸಿ ಎಸ್ ಆರ್ ಓ ವೆಬ್ ಸೈಟ್ ನಲ್ಲಿ ಅಪ್ ಲೋಡ್ ಮಾಡಿರುತ್ತೀರಾ ಎಂದರೆ ಸಾಕ್ಷಿ ಆಗ ಅಪ್ ಲೋಡ್ ಮಾಡುವ ವ್ಯವಸ್ಥೆ ಇರಲಿಲ್ಲ ಕರಾರುಪತ್ರದ ಕರಡು ಸಿದ್ಧಪಡಿಸಿಕೊಂಡು ಡಿ ಡಿ ತೆಗೆದುಕೊಂಡಿದ್ದೆ ಎಂದು ಹೇಳುತ್ತಾರೆ. ಕರಾರುಪತ್ರ ಸಿದ್ಧಪಡಿಸುವ ಪೂರ್ವದಲ್ಲಿ ಸ್ವತ್ತಿಗೆ ಸಂಬಂಧಿಸಿದ ಆರ್ ಟಿ ಸಿ, ಇಸಿ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿದ್ದೆನು. ಸಾಮಾನ್ಯವಾಗಿ ಕರಾರುಪತ್ರದಲ್ಲಿ ಗುಂಟೆಗೆ ಇಷ್ಟು ಎಂದು ಬರೆಯಬೇಕೆಂದರೆ ಸಾಕ್ಷಿ ಪಕ್ಷಗಾರರು ಮಾಹಿತಿ ಕೊಟ್ಟ ಮೇರೆಗೆ ನಾನು ಕರಾರುಪತ್ರ ತಯಾರಿಸಿರುತ್ತೇನೆಂದು ಹೇಳುತ್ತಾರೆ. ಬೆಲೆ ನಿಷ್ಕರ್ಷೆಯ ಬಗ್ಗೆ ಪಕ್ಷಗಾರರು ನಿಮ್ಮ ಕಚೇರಿಯಲ್ಲಿ ನಿಮ್ಮ ಸಮಕ್ಷಮ ಮಾತನಾಡಿಕೊಂಡಿರುತ್ತಾರಾ ಎಂದರೆ ಸಾಕ್ಷಿ ಇಲ್ಲವೆಂದು ಹೇಳುತ್ತಾರೆ.

3. ಸಾಮಾನ್ಯವಾಗಿ ಕ್ರಯದ ಶೇಕಡ 99 ಪ್ರತಿಫಲದ ಹಣ ಪಾವತಿಯಾದರೆ ಜಮೀನಿನ ಸ್ವಾಧೀನವನ್ನು ಖರೀದಿದಾರರಿಗೆ ಬಿಟ್ಟುಕೊಡುತ್ತಾರೆ ಎಂದರೆ ಸಾಕ್ಷಿ ದಾಖಲೆಗಳನ್ನು ಸರಿ ಪಡಿಸಿಕೊಂಡು ಬಂದ ನಂತರ ಕ್ರಯಪತ್ರ ಬರೆದುಕೊಟ್ಟು ಸ್ವಾಧೀನ ವಹಿಸಿಕೊಳ್ಳುವುದಾಗಿ ಬರೆಸುತ್ತಾರೆಂದು ಹೇಳುತ್ತಾರೆ. ಕರಾರುಪತ್ರ ಮಾಡಿಕೊಂಡ ದಿನವೇ ಕರಾರುತಪ್ರದ ಆಸ್ತಿಯನ್ನು ನೋಂದಣಿ ಮಾಡಿಸಬಹುದಿತ್ತು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿ 4

ದಿಕ್ಕಿನ ಗಡಿ ಎಲ್ಲೆಗಳನ್ನು ಸರಿ ಪಡಿಸಿಕೊಂಡು ಕ್ರಯಪತ್ರ ಮಾಡಿಕೊಳ್ಳುವುದಾಗಿ ಪಕ್ಷಗಾರರು ಮಾಹಿತಿ ಕೊಟ್ಟಿದ್ದರು, ಆದ್ದರಿಂದ ಕ್ರಯಪತ್ರ ನೋಂದಣಿ ಮಾಡಿಸಲಿಲ್ಲವೆಂದು ಹೇಳುತ್ತಾರೆ. ಸಾಕ್ಷೀದಾರರು ವಾದಿಯ ಸಂಬಂಧಿಕರು ಎಂದರೆ ನನಗೆ ಗೊತ್ತಿಲ್ಲವೆಲಂದು ಹೇಳುತ್ತಾರೆ. ನಿಪಿ.1 ನ್ನು ತಯಾರಿಸಲು ವಾದಿ ಒಬ್ಬರೆ ನಿಮಗೆ ಮಾಹಿತಿ ನೀಡಿದ್ದಾರೆ ಎಂದರೆ ಸರಿಯಲ್ಲ. ಉಗ್ರೇಗೌಡರು ರೂ.5 ಲಕ್ಷ ಸಾಲದ ಭದ್ರತೆಗಾಗಿ ನಿಪಿ.1 ನ್ನು ವಾದಿ ಹೆಸರಿಗೆ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ನಿಪಿ.1 ಯಾವ ಶೀರ್ಷಿಕೆಯ ದಾಖಲೆ ಎಂದರೆ ಸಾಕ್ಷಿ ಕ್ರಯದ ಒಪ್ಪಂದ ಕರಾರುಪತ್ರವೆಂದು ಹೇಳುತ್ತಾರೆ. ನಿಪಿ.1 ಉಗ್ರೇಗೌಡರು ಮಾಡಿದ್ದ ಸಾಲಕ್ಕಾಗಿ ಸ್ವಾಧೀನ ರಹಿತ ಕ್ರಯದ ಪತ್ರ ಎಂದರೆ ಸರಿಯಲ್ಲ. ವಾದಿಗೆ ಅನುಕೂಲವಾಗಲಿ ಎಂದು ಅವರ ಪರವಾಗಿ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***